## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 55 ಇಎಸ್‌ಟಿ(7) 2020-21/500

ಅಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001,
ದಿನಾಂಕ: 15-09-2020.

### ಜ್ಞಾಪನ

**ವಿಷಯ:** ದಿನಾಂಕ:21-09-2020 ರಿಂದ ಪ್ರಾರಂಭವಾಗಲಿರುವ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನಗಳ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆಯುಕ್ತರು ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಯವರಿಗೆ ದಿನಾಂಕ:21-09-2020 ರಿಂದ ಪ್ರಾರಂಭವಾಗಲಿರುವ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನಗಳು ಮುಗಿಯುವವರೆಗೂ ಅವರ ಹೆಸರಿನ ಮುಂದೆ ನಮೂದಿಸಿರುವ ಕಾರ್ಯವನ್ನು ವಹಿಸಲಾಗಿದೆ.

| | | |
|---|---|---|
| ಅ | ಶ್ರೀ ಜಿ. ಶ್ರೀಕಾಂತ್,<br>ಜಂಟಿ ನಿರ್ದೇಶಕರು(ತನಿಖೆ),<br>9448820473 | ವಿಧಾನ ಸಭೆ ಮತ್ತು ವಿಧಾನ ಪರಿಷತ್ ಕಾರ್ಯಕಲಾಪಗಳಿಗೆ ಮಾಹಿತಿ ಒದಗಿಸುವ ಹಾಗೂ ಪ್ರಶ್ನೆಗಳಿಗೆ ಉತ್ತರಗಳನ್ನು ಸಕಾಲದಲ್ಲಿ ಕಳುಹಿಸುವ ಹಾಗೂ ಕಾಲಕಾಲಕ್ಕೆ ಆಯುಕ್ತರಿಗೆ ವರದಿ ನೀಡುವ ಸಂಪೂರ್ಣ ಉಸ್ತುವಾರಿ. |
| | ಶ್ರೀ ಡಿ.ವಿ ಶ್ರೀನಿವಾಸ ಮೂರ್ತಿ,<br>ಸಹಾಯಕ ನಿರ್ದೇಶಕರು<br>8792690565 | ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನಕ್ಕೆ ಸಂಬಂಧಿಸಿದ ಈ ಇಲಾಖೆಯ ವ್ಯಾಪ್ತಿಗೆ ಬರುವಂತಹ ವಿಷಯಗಳನ್ನು ಸಂಗ್ರಹಿಸಿ ಬಂದ ಪ್ರಶ್ನೆಗಳಿಗೆ ಉತ್ತರಗಳನ್ನು ತುರ್ತಾಗಿ ಕಳುಹಿಸುವ ಸಲುವಾಗಿ ಸಂಯೋಜನಾಧಿಕಾರಿಗಳನ್ನಾಗಿ ನೇಮಿಸಿದೆ. |
| ಆ | ಶ್ರೀ ಮಂಜುನಾಥ್ ರೆಡ್ಡಿ,<br>ಸಹಾಯಕ ನಿರ್ದೇಶಕರು(ನಿಯೋಜನೆ)<br>9845223550<br><br>ಶ್ರೀ ಸೆಲ್ವಡಾರ್ ಡಿ. ಗೋನ್ಸಾಲ್ವೀಸ್,<br>ಅಭಿವೃದ್ಧಿ ಅಧಿಕಾರಿ,<br>9008785014 | ವಿಧಾನ ಸಭೆಯ ಅಧಿವೇಶನಗಳು ನಡೆಯುವಾಗ ಅಧಿವೇಶನದಲ್ಲಿ ಪಾಲ್ಗೊಂಡು ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬಂದಾಗ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಮತ್ತು ಅವರ ಸಿಬ್ಬಂದಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸುವುದು ಮತ್ತು ತತ್ಸಬಂಧದ ನಡವಳಿಗಳನ್ನು ಆಯುಕ್ತರ ಗಮನಕ್ಕೆ ತರುವುದು. ಅಲ್ಲದೇ ಪ್ರತಿ ನಿತ್ಯ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಧಾನ ಮಂಡಳದ ಪ್ರಶ್ನೆಗಳು ಮತ್ತು ತತ್ಸಬಂಧದ ಇತರೆ ವಿಷಯಗಳನ್ನು ಅರಿತುಕೊಂಡು ಜರೂರಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮ ಕುರಿತು ಆಯುಕ್ತರಿಗೆ ಮತ್ತು ನಿರ್ದೇಶಕರಿಗೆ ಹಾಗೂ ಜಂಟಿ ನಿರ್ದೇಶಕರು(ಆಡಳಿತ) ಇವರಿಗೆ ವರದಿ ನೀಡುವುದು. |

(…………2)

| | | |
|---|---|---|
| ಇ | ಶ್ರೀ ಶ್ರೀನಿವಾಸ್,<br>ಸಂಯೋಜನಾಧಿಕಾರಿ (ಇ-ಆಡಳಿತ)<br>9448734378<br><br>ಶ್ರೀ ಜಗದೀಶ್ ಡಿ.ಹೆಚ್,<br>ಅಭೀವೃದ್ಧಿ ಅಧಿಕಾರಿ<br>(ಎಲ್.ಆರ್.ಡಿ.ಸಿ)<br>9900180652 | ವಿಧಾನ ಪರಿಷತ್ತಿನಲ್ಲಿ ಅಧಿವೇಶನಗಳು ನಡೆಯುವಾಗ ಅಧಿವೇಶನದಲ್ಲಿ ಪಾಲ್ಗೊಂಡು ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬಂದಾಗ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಮತ್ತು ಅವರ ಸಿಬ್ಬಂದಿಗೆ ಬೇಕಾಗಿರುವ ಸಿಬ್ಬಂದಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸುವುದು ಮತ್ತು ತತ್ಸಬಂಧಿತ ನಡವಳಿಗಳನ್ನು ಆಯುಕ್ತರ ಗಮನಕ್ಕೆ ತರುವುದು. ಅಲ್ಲದೇ ಪ್ರತಿ ನಿತ್ಯ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಧಾನ ಮಂಡಳದ ಪ್ರಶ್ನೆಗಳು ಮತ್ತು ತತ್ಸಬಂಧದ ಇತರೆ ವಿಷಯಗಳನ್ನು ಅರಿತುಕೊಂಡು ಜರೂರಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮ ಕುರಿತು ಆಯುಕ್ತರಿಗೆ ಮತ್ತು ನಿರ್ದೇಶಕರಿಗೆ ಹಾಗೂ ಜಂಟಿ ನಿರ್ದೇಶಕರು(ಆಡಳಿತ) ಇವರಿಗೆ ವರದಿ ನೀಡುವುದು. |
| ಈ | ಶ್ರೀ ವಿನೋದ್ ರಾಜ್ ಕೆ.ಪಿ,<br>ಪ್ರ.ದ.ಸ<br>9880964933<br>ಶ್ರೀ ಚಾಗಿ ಮಂಜುನಾಥ,<br>ದ್ವಿ.ದ.ಸ<br>9964694963 | ಪ್ರತಿ ನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ವಿಧಾನ ಮಂಡಲದ ಸಚಿವಾಲಯದ ಮತ್ತು ಶಿಕ್ಷಣ ಸಚಿವಾಲಯದಿಂದ ಪ್ರತಿ ದಿನ ಮತ್ತು ಮರುದಿನ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ಅಧಿವೇಶನಗಳಿಗೆ ನಿಗದಿಪಡಿಸಿರುವ ವ್ಯವಹಾರಗಳ ಮತ್ತು ಇತರ ವಿಷಯಗಳ ಪಟ್ಟಿಯನ್ನು ಪಡೆದು ಆಯುಕ್ತರು ಮತ್ತು ಮೇಲ್ಕಂಡ ಅಧಿಕಾರಿ ವರ್ಗದವರ ಗಮನಕ್ಕೆ ತರುವುದು. |

ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗಗಳ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು (ಗ್ರೂಪ್-ಡಿ ನೌಕರರು ಸೇರಿದಂತೆ) ಅಧಿವೇಶನ ನಡೆಯುವಷ್ಟು ಕಾಲ ಯಾವುದೇ ರೀತಿಯ ರಜೆ ಹಾಕಬಾರದು ಹಾಗೂ ಕಛೇರಿ ವೇಳೆಯಲ್ಲಿ ಮತ್ತು ಕಛೇರಿ ವೇಳೆಯ ನಂತರವೂ ಸಂಬಂಧಪಟ್ಟ ವಿಭಾಗಗಳಲ್ಲಿ ಹಾಜರಿದ್ದು ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರಶ್ನೆಗಳಿಗೆ/ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪೂರಕ ಟಿಪ್ಪಣಿಯೊಂದಿಗೆ ತಯಾರಿಸಿ ಕೊಡತಕ್ಕದ್ದು ಹಾಗೂ ಸರ್ಕಾರಕ್ಕೆ ತಲುಪಿಸತಕ್ಕದ್ದು. ಇಲ್ಲವಾದಲ್ಲಿ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಆಯುಕ್ತರು

ಇವರಿಗೆ,

ಮೇಲ್ಕಂಡ ಅಧಿಕಾರಿಗಳು/ಸಿಬ್ಬಂದಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1

(…………3)

2. ಸರ್ಕಾರದ ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
3. ಸರ್ಕಾರದ ಕಾರ್ಯದರ್ಶಿ, ವಿಧಾನ ಪರಿಷತ್ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
4. ಸರ್ಕಾರದ ಜಂಟಿ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1
5. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1
6. ಆಯುಕ್ತರ ಆಪ್ತಶಾಖೆ,
7. ನಿರ್ದೇಶಕರ ಆಪ್ತಶಾಖೆ
8. ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗಗಳ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಹಾಗೂ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳು/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಯವರು ಅಧಿವೇಶನ ನಡೆಯುವಷ್ಟು ಕಾಲ ಯಾವುದೇ ರೀತಿಯ ರಜೆ ಹಾಕಬಾರದು ಹಾಗೂ ಕಛೇರಿ ವೇಳೆಯಲ್ಲಿ ಮತ್ತು ಕಛೇರಿ ವೇಳೆಯ ನಂತರವೂ ಸಂಬಂಧಪಟ್ಟ ವಿಭಾಗಗಳಲ್ಲಿ ಹಾಜರಿದ್ದು ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರಶ್ನೆಗಳಿಗೆ/ಗಮನ ಸೆಳೆಯುವ ಸೂಚನೆಗಳಿಗೆ ಪೂರಕ ಮಾಹಿತಿಯನ್ನು ತ್ವರಿತವಾಗಿ ಒದಗಿಸತಕ್ಕದ್ದು - **ಇಲಾಖಾ ವೆಬ್‌ಸೈಟ್ ಮೂಲಕ**
9. ನಿರ್ದೇಶನಾಲಯದ ಎಲ್ಲಾ ವಾಹನ ಚಾಲಕರು ವಿಧಾನಸಭೆಯ ಕಲಾಪಗಳು ಮುಗಿಯವವರೆಗೆ ಅಧಿವೇಶನದA ಕೆಲಸಕ್ಕೆ ಹಾಜರಾಗುವ ಹಿರಿಯ ಅಧಿಕಾರಿಗಳಿಗಾಗಿ ವಾಹನ ಉಪಯೋಗಿಸುವಂತೆ ಸೂಚಿಸಲಾಗಿದೆ.
10. ಲೆಕ್ಕಾಧಿಕಾರಿಗಳ ಗಮನಕ್ಕೆ - ಪರಿವೀಕ್ಷಣೆಗೆ ಹೋಗುವ ಸಿಬ್ಬಂದಿಗಳು ಅಧಿವೇಶನ ಮುಗಿಯುವರೆಗೆ ಹೋಗತಕ್ಕದ್ದಲ್ಲ ಎಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ.
11. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ